# ಸೋನಿ ಎಂಟರ್ ಟೇನ್ಮೆಂಟ್ ನ ಶಾರ್ಕ್ ಟ್ಯಾಂಕ್ ಇಂಡಿಯಾ ಶೋಗೆ ಫ್ಲಿಪ್ ಕಾರ್ಟ್ ಸಹಭಾಗಿತ್ವ

ಬೆಂಗಳೂರು, ಡಿಸೆಂಬರ್ 15, 2021:ದೇಶದಲ್ಲಿ ಮುಂಚೂಣಿಯಲ್ಲಿರುವ ಇ-ಕಾಮರ್ಸ್ ಪ್ಲಾಟ್ ಫಾರ್ಮ್ ಆಗಿರುವ ಫ್ಲಿಪ್ ಕಾರ್ಟ್ ಪ್ರತಿಷ್ಠಿತ ಶಾರ್ಕ್ ಟ್ಯಾಂಕ್ ಇಂಡಿಯಾ ಶೋಗೆ ಸೋನಿ ಎಂಟರ್ ಟೇನ್ಮೆಂಟ್ ಟೆಲಿವಿಷನ್ ಜೊತೆಗೆ ಪಾಲುದಾರಿಕೆಯನ್ನು ಮಾಡಿಕೊಂಡಿದೆ. ಶಾರ್ಕ್ ಟ್ಯಾಂಕ್ ಇಂಡಿಯಾ ಒಂದು ಜಾಗತಿಕವಾಗಿ ಹೆಸರುವಾಸಿಯಾಗಿರುವ ಬಿಸಿನೆಸ್ ರಿಯಾಲಿಟಿ ಫಾರ್ಮ್ಯಾಟ್ ಆಗಿದೆ. ಇದು ವಿಶ್ವದ 40 ಕ್ಕೂ ಹೆಚ್ಚು ದೇಶಗಳಲ್ಲಿ ಶೋಗಳನ್ನು ನಡೆಸಿಕೊಟ್ಟಿರುವ ಕೀರ್ತಿಯನ್ನು ಹೊಂದಿದೆ(2001 ರಲ್ಲಿ ಆರಂಭವಾದಾಗಿನಿಂದ ಇಲ್ಲಿವರೆಗೆ). ಇದೀಗ ಇದೇ ಮೊದಲ ಬಾರಿಗೆ ಭಾರತದಲ್ಲಿ ಶೋ ನಡೆಸಲಿದ್ದು, ಭಾರತದಲ್ಲಿನ ಸ್ಟಾರ್ಟ್ ಅಪ್ ಪರಿಸರ ವ್ಯವಸ್ಥೆಯನ್ನು ವೇಗಗೊಳಿಸುವ ನಿಟ್ಟಿನಲ್ಲಿ ಸಹಕಾರ ನೀಡಲಿದೆ. ಶಾರ್ಕ್ ಟ್ಯಾಂಕ್ ಇಂಡಿಯಾವು ಸ್ಟಾರ್ಟಪ್ ಗಳಿಗೆ ತಮ್ಮ ಬಿಸಿನೆಸ್ ಪರಿಕಲ್ಪನೆಗಳು, ಬಿಸಿನೆಸ್ ಮಾದರಿಗಳನ್ನು ವೃದ್ಧಿಸಿಕೊಳ್ಳುವುದು, ಅನುಭವಿ ಹೂಡಿಕೆದಾರರು ಮತ್ತು ಬಿಸಿನೆಸ್ ಪರಿಣತರಿಂದ ಸಕ್ರಿಯ ಬಿಸಿನೆಸ್ ಗಳನ್ನು ಮೇಲ್ಮಟ್ಟಕ್ಕೆ ಹೆಚ್ಚಿಸಿಕೊಳ್ಳುವ ದಿಸೆಯಲ್ಲಿ ಇದು ಭರವಸೆ ಮೂಡಿಸಲಿದೆ. ಈ ಶಾರ್ಕ್ ಟ್ಯಾಂಕ್ ಇಂಡಿಯಾ ಶೋ ಸೋನಿ ಎಂಟರ್ ಟೇನ್ಮೆಂಟ್ ಟೆಲಿವಿಷನ್ ನಲ್ಲಿ ಡಿಸೆಂಬರ್ 20 ರಿಂದ ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ 9 ಗಂಟೆಗೆ ಪ್ರಸಾರವಾಗಲಿದೆ.

ಈ ಪಾಲುದಾರಿಕೆಯ ಭಾಗವಾಗಿ ಫ್ಲಿಪ್ ಕಾರ್ಟ್ ನ ಹಲವಾರು ಮಾರಾಟಗಾರ ಸದಸ್ಯ ಸಂಸ್ಥೆಗಳು ಶಾರ್ಕ್ಸ್ ಗೆ ತಮ್ಮ ಬಿಸಿನೆಸ್ ಪರಿಕಲ್ಪನೆಗಳನ್ನು ಪರಿಚಯಿಸಲು ಅವಕಾಶ ದೊರೆಯಲಿದೆ. ಈ ಮೂಲಕ ಸಾಕಷ್ಟು ಬಂಡವಾಳವನ್ನು ಆಕರ್ಷಿಸಲು ನೆರವಾಗುತ್ತದೆ. ಇದಲ್ಲದೇ, ಶಾರ್ಕ್ ಟ್ಯಾಂಕ್ ಇಂಡಿಯಾದ ಅನೇಕ ಸಂಸ್ಥೆಗಳು (ಉದ್ಯಮಗಳು) ಫ್ಲಿಪ್ ಕಾರ್ಟ್ ನಲ್ಲಿ ತಮ್ಮ ಉತ್ಪನ್ನಗಳನ್ನು ಪ್ರದರ್ಶನ ಮತ್ತು ಮಾರಾಟ ಮಾಡಲು ಅವಕಾಶ ದೊರೆಯುತ್ತದೆ. ಇದರೊಂದಿಗೆ ಶಾರ್ಕ್ ಟ್ಯಾಂಕ್ ಇಂಡಿಯಾದ ಉದ್ಯಮಗಳು ಭಾರತದಾದ್ಯಂತ ಇರುವ ಲಕ್ಷಾಂತರ ಗ್ರಾಹಕರಿಗೆ ತಮ್ಮ ಉತ್ಪನ್ನಗಳನ್ನು ತಲುಪಿಸಬಹುದಾಗಿದೆ.

ಕಳೆದ ವರ್ಷವು ಭಾರತದಾದ್ಯಂತ ಲಕ್ಷಾಂತರ ಜನರ ಜೀವನವನ್ನು ಬದಲಾಯಿಸಿದೆ. ಇದು ಆರ್ಥಿಕತೆಯ ಎಲ್ಲಾ ಕ್ಷೇತ್ರಗಳ ಮೇಲೆ ಪರಿಣಾಮ ಬೀರುತ್ತದೆ ಮತ್ತು ವ್ಯವಹಾರಗಳು ಕಾರ್ಯನಿರ್ವಹಣೆ ಮಾಡುವ ವಿಧಾನವನ್ನು ಪರಿವರ್ತಿಸಿದೆ. ಫ್ಲಿಪ್ ಕಾರ್ಟ್ ದೇಶದಲ್ಲಿ ಸ್ಥಳೀಯ

ಎಂಎಸ್ಎಂಇ ಸಮುದಾಯವನ್ನು ಹೆಚ್ಚು ಡಿಜಿಟಲ್ ಮಾಡುವ ಮೂಲಕ ಮತ್ತು ಅವರ ವ್ಯಾಪಾರ ಪ್ರಯಾಣವನ್ನು ಪರಿವರ್ತನೆ ಮಾಡುವ ಮೂಲಕ ಅವುಗಳನ್ನು ಸಬಲೀಕರಣಗೊಳಿಸಲು ನಿರಂತರವಾಗಿ ಒತ್ತು ನೀಡಿದೆ. ಕಳೆದ ಒಂದು ವರ್ಷದಲ್ಲಿ ಈ ಮಿಷನ್ ಪರಿಸರ ವ್ಯವಸ್ಥೆಗೆ ಆಳವಾದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಇ-ಕಾಮರ್ಸ್ ಜೀವನೋಪಾಯವನ್ನು ಉಳಿಸಿಕೊಳ್ಳುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತಿದೆ. ಅಲ್ಲದೇ, ಭಾರತದಾದ್ಯಂತ ಇರುವ ಎಂಎಸ್ಎಂಇಗಳಿಗೆ ಕಾರ್ಯಾಚರಣೆಯ ಪುನಶ್ಚೇತನವನ್ನು ನೀಡುವುದನ್ನು ಸಕ್ರಿಯಗೊಳಿಸುತ್ತದೆ.

ಈ ಪಾಲುದಾರಿಕೆ ಬಗ್ಗೆ ಮಾತನಾಡಿದ ಫ್ಲಿಪ್ ಕಾರ್ಟ್ ಗ್ರೂಪ್ ನ ಚೀಫ್ ಕಾರ್ಪೋರೇಟ್ ಅಫೇರ್ಸ್ ಆಫೀಸರ್ ರಜನೀಶ್ ಕುಮಾರ್ ಅವರು, ``ಸೋನಿ ಎಂಟರ್ ಟೇನ್ಮೆಂಟ್ ನ ಶಾರ್ಕ್ ಟ್ಯಾಂಕ್ ಇಂಡಿಯಾದೊಂದಿಗೆ ಮಾಡಿಕೊಂಡಿರುವ ಪಾಲುದಾರಿಕೆಯು ಭಾರತದಲ್ಲಿ ಉದ್ಯಮಶೀಲತ್ವವನ್ನು ಪ್ರೋತ್ಸಾಹಿಸುವುದು, ಅವುಗಳನ್ನು ಸದೃಢಗೊಳಿಸುವುದು ಮತ್ತು ಮೇಲ್ಮಟ್ಟಕ್ಕೆ ಏರಿಸುವ ನಮ್ಮ ದೂರದೃಷ್ಟಿಯ ಮತ್ತೊಂದು ಹೆಜ್ಜೆಯಾಗಿದೆ. ದೇಶದ ವಿವಿಧ ಭಾಗಗಳಲ್ಲಿರುವ ಅಂತರ್ಗತವಾದ ಪ್ರತಿಭಾನ್ವಿತ ಉದ್ಯಮಿಗಳಿಗೆ ತಮ್ಮ ವ್ಯಾಪಾರವನ್ನು ವೃದ್ಧಿಸಿಕೊಳ್ಳಲು ವೇದಿಕೆಯನ್ನು ಒದಗಿಸುವ ಮೂಲಕ ಪರಿಸರ ವ್ಯವಸ್ಥೆಯ ಬೆಳವಣಿಗೆಯನ್ನು ವೇಗಗೊಳಿಸಲು ಇದು ನಮಗೆ ಉತ್ತಮ ಅವಕಾಶವನ್ನು ನೀಡುತ್ತದೆ. `ಸ್ಟಾರ್ಟಪ್ ಇಂಡಿಯಾ'ವನ್ನು ಬೆಂಬಲಿಸುವ ನಿಟ್ಟಿನಲ್ಲಿ ನಮ್ಮ ನಿರಂತರವಾದ ಪ್ರಯತ್ನಗಳಲ್ಲಿ ಉದ್ಯಮಶೀಲತೆಯ ಮನೋಭಾವವನ್ನು ಪುನರುಜ್ಜೀವನಗೊಳಿಸಲು ಈ ಪಾಲುದಾರಿಕೆಯು ವೇಗವರ್ಧಕ ಶಕ್ತಿಯಾಗಿದೆ ಎಂದು ನಾವು ಭಾವಿಸುತ್ತೇವೆ'' ಎಂದರು.

ಸೋನಿ ಪಿಕ್ಚರ್ಸ್ ನೆಟ್ ವರ್ಕ್ಸ್ ಇಂಡಿಯಾದ ನೆಟ್ವರ್ಕ್ ಚಾನೆಲ್ಸ್ ನ ಆ್ಯಡ್ ಸೇಲ್ಸ್ ಮುಖ್ಯಸ್ಥ ಸಂದೀಪ್ ಮೆಹ್ರೋತ್ರ ಅವರು ಮಾತನಾಡಿ, ``ಇದು ಶಾರ್ಕ್ ಟ್ಯಾಂಕ್ ಇಂಡಿಯಾದ ಮೊದಲ ಸೀಸನ್ ಮತ್ತು ನಾವು ಈ ಸೀಸನ್ ಗೆ ಫ್ಲಿಪ್ ಕಾರ್ಟ್ ಜೊತೆಗೆ ಪಾಲುದಾರಿಕೆ ಹೊಂದಲು ಸಂತೋಷವಾಗುತ್ತಿದೆ. ಈ ಸಹಭಾಗಿತ್ವದ ಮೂಲಕ ನಮ್ಮ ಪ್ರತಿಪಾದನೆಯನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲು ಸಹಾಯ ಮಾಡುವ ನವೀನ ಮಾದರಿಯ ಪರಿಹಾರಗಳಿಗೆ ಅವಕಾಶಗಳನ್ನು ಕಲ್ಪಿಸುವ ಸಮಾನ ಮನಸ್ಕ ಪಾಲುದಾರರನ್ನು ಹೊಂದಲು ನಾವು ಸಂತಸಪಡುತ್ತೇವೆ. ಶಾರ್ಕ್ ಟ್ಯಾಂಕ್ ಇಂಡಿಯಾ ಕೇವಲ ಒಂದು ವೇದಿಕೆಯಾಗಿರುವುದಿಲ್ಲ. ಇದು ದೇಶದ ಉದ್ಯಮಶೀಲತೆಯ ಮನಸ್ಥಿತಿಯನ್ನು ಹೆಚ್ಚಿನ ಮಟ್ಟಕ್ಕೆ ಕೊಂಡೊಯ್ಯಲು ಸಹಾಯ ಮಾಡುವ ವೇದಿಕೆಯೂ ಆಗಿದೆ'' ಎಂದು ಅಭಿಪ್ರಾಯಪಟ್ಟರು.

**Flipkart's approach to unlocking ecosystem potential**

*~ Flipkart consistently works towards unlocking ecosystem potential and nurturing new ideas that bring innovation, curiosity and unconventionality to the local entrepreneurial landscape*
*~ During most of the past decade, Flipkart has been an active investor in the ecosystem and has a current portfolio of minority investments in more than 12 companies*
*~ Flipkart Leap is an accelerator program dedicated to help new and upcoming startups grow, scale, navigate challenges and in turn contribute to India's growing entrepreneurial ecosystem and boosting 'Start-Up India'*
*~ Flipkart Ventures financially enables digital startups to bring their brilliant ideas to fruition.*
*~ Both Leap and Ventures initiatives complement each other and add impetus to the shared purpose of boosting innovative technologies*
*~ 'Flipkart Boost' is an integrated programme for new age digital-first consumer brands to move into the next phase of growth. Through a service fee model, Flipkart Boost provides emerging Made in India brands end-to-end support covering planning, advertising, cataloguing, logistics, quality control and mentoring.*

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, Flipkart Wholesale, Flipkart Health+ and Cleartrip. The Group is also a majority shareholder in PhonePe, one of the leading Payments Apps in India.

Started in 2007, Flipkart has enabled millions of consumers, sellers, merchants, and small businesses to be a part of India's digital commerce revolution, with a registered customer base of more than 400 million, offering over 150 million products across 80+ categories. Our efforts to democratize commerce in India, drive access and affordability, delight customers, create lakhs of jobs in the ecosystem, and empower generations of entrepreneurs and MSMEs have inspired us to innovate on many industry firsts. Flipkart is known for pioneering services such as Cash on Delivery, No Cost EMI and easy returns – customer-centric innovations have made online shopping more accessible and affordable for millions of Indians. Together with its group companies, Flipkart is committed to transforming commerce in India through technology.

For more information, please write to **media@flipkart.com**